# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ದಕ್ಷಿಣ ವಲಯ

## ಬೈರಸಂದ್ರ , ಹೊಸ ವಾರ್ಡ ಸಂಖ್ಯೆ: 196 (ಹಳೆಯ ವಾರ್ಡ ಸಂಖ್ಯೆ: 168 & 169)

**ದಿನಾಂಕ:19.10.2022 ರಂದು ಹೊಸ ವಾರ್ಡ ಸಂಖ್ಯೆ 196 ಬೈರಸಂದ್ರ ವಾರ್ಡನಲ್ಲಿ ನಡೆದ ವಾರ್ಡ ಸಮಿತಿ ಸಭೆ:**

## –: ಸಮಿತಿ ಸಭೆಯ ನಡವಳಿಗಳು :–

ವಾರ್ಡ ಸಮಿತಿ ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು ಮತ್ತು ವಾರ್ಡ ಸಮಿತಿ ಸದಸ್ಯರು:–

| ಕ್ರ.ಸಂ | ಹೆಸರು | ಹುದ್ದೆ |
|---|---|---|
| 01 | ಶ್ರೀ ವಾಲು ರಾಥೋಡ್ | ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳು |
| 02 | ಶ್ರೀ ಚಂದ್ರಶೇಖರ್ ವಿ | ಕಾರ್ಯಾದರ್ಶಿ ಮತ್ತು ಸಂಚಾಲಕರು |
| 03 | ಶ್ರೀ ರಾಮಚಂದ್ರ .ಸಿ | ಹಿರಿಯ ಆರೋಗ್ಯ–168 ನಿರೀಕ್ಷಕರು, ಬಿ.ಬಿ.ಎಂ.ಪಿ |
| 04 | ಶ್ರೀಮತಿ ಪೊನಂ ಬಿ | ಹಿರಿಯ ಆರೋಗ್ಯ ನಿರೀಕ್ಷಕರು, ಬಿ.ಬಿ.ಎಂ.ಪಿ |
| 05 | ಶ್ರೀ ರಮೇಶ್ ವಿ ಬಿ | ಕಿರಿಯ ಆರೋಗ್ಯ ನಿರೀಕ್ಷಕರು, ಬಿ.ಬಿ.ಎಂ.ಪಿ |
| 06 | ಶ್ರೀ ಶಿವಯೋಗಿ | ಜಯನಗರ ಸಂಚಾರಿ ಪೋಲಿಸ್ ಠಾಣೆ |
| 07 | ಶ್ರೀ ಗೌತಮ್.ವೈ | SWI ವಾರ್ಡ–168 |
| 08 | ಶ್ರೀ ಎಮ್.ಎ. ಹುಸೇನ್ | ASI ಮೈಕೋ ಸಂಚಾರಿ ಪೋಲಿಸ್ ಠಾಣೆ |
| 09 | ಶ್ರೀ ಮಧು.ಎನ್ | SWI ವಾರ್ಡ –168 |
| 10 | ಶ್ರೀ ಗೋವಿಂದರಾಜ್ | SWM ಜಯನಗರ |
| 11 | ಶ್ರೀಮತಿ ಮಂಜುಳ .ಕೆ.ಸಿ | ತೋಟಗಾರಿಕೆ ಇಲಾಖೆ, (ದಕ್ಷಿಣ), ಬಿ.ಬಿ.ಎಂ.ಪಿ ಜಯನಗರ |
| 12 | ಶ್ರೀಮತಿ ಶ್ರಿಜಾ . ಎಸ್ | ಸ.ಅ, BWSSB ಜಯನಗರ |
| 13 | ಶ್ರೀ ಕವಿರಾಜ ಕೆ | ವಾರ್ಡ ಮಾರ್ಷಲ್ 169 |
| 14 | ಶ್ರೀ ನವೀನ್ ಕುಮಾರ್ ಪಿ | ವಾರ್ಡ ಮಾರ್ಷಲ್ 168 |
| 15 | ಶ್ರೀ ಲಕ್ಷ್ಮಣ ರಾಥೋಡ್ | ASI ತಿಲಕ್‌ನಗರ ಪೋಲಿಸ್ ಠಾಣೆ |
| 16 | ಶ್ರೀಮತಿ ಡಾ. ಹಲೀಮ್ ಸಾರ | MO-168, ಆರೋಗ್ಯ ಇಲಾಖೆ, ಬಿ.ಬಿ.ಎಂ.ಪಿ |
| 17 | ಕುಮಾರಿ ವಿಶಾಲಕ್ಷಿ ಬಂಡಿ | ಸಹಾಯಕ ಅಭಿಯಂತರರು ವಾರ್ಡ –168 |
| 18 | Zachaias | ಜಯನಗರ ಸಂಚಾರಿ ಪೋಲಿಸ್ ಠಾಣೆ |
| 19 | ವಾರ್ಡ 169 ರ ಸ್ಥಳಿಯ ನಿವಾಸಿಗಳ ಸಂಘ ಮತ್ತು ಸಾರ್ವಜನಿಕರು | |

ವಾರ್ಡ ಸಮಿತಿ ಅದ್ಯಕ್ಷರು ಸಭೆಗೆ ಹಾಜರಿದ್ದ ಎಲ್ಲಾ ಸದಸ್ಯರು ಮತ್ತು ಅಧಿಕಾರಿ ವರ್ಗದವರಿಗೆ ಸ್ವಾಗತ ಕೋರುತ್ತಾ , ಸಭೆಯನ್ನು ಪ್ರಾರಂಭಿಸಿದರು.

1. ಮಾನ್ಯ ನೋಡಲ್ ಅಧಿಕಾರಿಗಳು ಮಾತನಾಡುತ್ತಾ ದಿನಾಂಕ 01.10.2022 ರಂದು ಸಾರ್ವಜನಿಕರು ತಿಳಿಸಿದ ಸಮಸ್ಯೆಗಳ ಬಗ್ಗೆ ಹಾಗೂ ಅಧಿಕಾರಿಗಳು ತೆಗೆದುಕೊಂಡ ಕ್ರಮದ ಮಾಹಿತಿ ಪಡೆದುಕೊಂಡರು.
2. LIC ಕಾಲೋನಿನಲ್ಲಿರುವ 4ನೇ ಅಡ್ಡರಸ್ತೆಯಲ್ಲಿ ಕಾವೇರಿ ನೀರಿನ ಪೈಪ್ ಹಾನಿಯಾಗುತ್ತಿದ್ದು. ಕೊಡಲೇ ನೀರಿನ ಪೈಪ್‌ನ್ನು ದುರಸ್ತಿ ಪಡೆಸಲು ಸಭೆಯಲ್ಲಿ ಕೋರಿದರು. **(ಕ್ರಮ: ಸ.ಕಾ.ನಿ.ಅ, BWSSB ಜಯನಗರ)**

3. ಹಳೆಯ ವಾರ್ಡ ಸಂಖ್ಯೆ 169 ರಲ್ಲಿರುವ 10ನೇ ಅಡ್ಡರಸ್ತೆಯಲ್ಲಿ Shoulder drain ಮಾಡಿದ್ದು, ಆದರೆ Shoulder drain ಗಳಿಗೆ Steel Grating ಅಳವಡಿಸಿರುದಿಲ್ಲ ಮತ್ತು ಇನ್ನು ಅನೇಕ ಕಡೆ Shoulder drain ನಿರ್ಮಾಣ ಮಾಡುವಂತೆ ಸಭೆಯಲ್ಲಿ ಕೋರಿದರು. **(ಕ್ರಮ: ಸ.ಕಾ.ನಿ.ಅ, SWD (South), ಬಿ.ಬಿ.ಎಂ.ಪಿ)**

4. ಹಳೆಯ ವಾರ್ಡ ಸಂಖ್ಯೆ 168 ರಲ್ಲಿರುವ 28ನೇ ಮುಖ್ಯರಸ್ತೆಯ (ವಿಷ್ಣುವರ್ಧನ್ ಪಾರ್ಕನ) ರಸ್ತೆಯ ಎರಡು ಬದಿ ವಾಹನಗಳನ್ನು ನಿಲ್ಲಿಸುವುದರಿಂದ ವಾಹನ ಒಡಡಲು ತುಂಬಾ ತೊಂದರೆಯಾಗುತ್ತಿದ್ದು. ಇದರ ಬಗ್ಗೆ ಕ್ರಮ ವಹಿಸುವಂತೆ ಸಭೆಯಲ್ಲಿ ಕೋರಿದರು. **(ಕ್ರಮ: ಮೈಕೊ ಲೇಔಟ್ ಸಂಚಾರ ಪೋಲಿಸ್ ಠಾಣೆ)**

5. ಹಳೆಯ ವಾರ್ಡ ಸಂಖ್ಯೆ 169 ರಲ್ಲಿರುವ 10ನೇ ಅಡ್ಡರಸ್ತೆಯಲ್ಲಿ Strom water drain (SWD) ಮೇಲೆ ಮತ್ತು ಅಖಾಂಡೇಶ್ವರ ದೇವಸ್ಥಾನದ ಹತ್ತಿರ ವಾಹನಗಳನ್ನು ಪಾರ್ಕ ಮಾಡುತ್ತಿದ್ದು. ಇದರಿಂದ ಪಾದಚಾರಿ ಮಾರ್ಗದ ಮೇಲೆ ಸಾರ್ವಜನಿಕರು ಓಡಾಡಲು ತುಂಬಾ ತೊಂದರೆಯಾಗುತ್ತಿದ್ದು. ಇದರ ಬಗ್ಗೆ ಕ್ರಮ ವಹಿಸುವಂತೆ ಸಭೆಯಲ್ಲಿ ಕೋರಿದರು. **(ಕ್ರಮ: ಮೈಕೊ ಲೇಔಟ್ ಸಂಚಾರ ಪೋಲಿಸ್ ಠಾಣೆ)**

6. LIC ಕಾಲೋನಿನಲ್ಲಿರುವ 3ನೇ ಅಡ್ಡರಸ್ತೆ ಮತ್ತು 5ನೇ ಅಡ್ಡರಸ್ತೆ ನಲ್ಲಿರುವ ಮರದ ಉದ್ದವಾಗಿರುವ ಕೊಂಬೆಗಳು ಬೀಳುವ ಸ್ಥಿತಿಯಲ್ಲಿದ್ದು. ಸದರಿ ರಸ್ತೆಗಳಲ್ಲಿರುವ ಮರದ ಕೊಂಬೆಗಳನ್ನು ಕತ್ತರಿಸುವಂತೆ ಸಭೆಯಲ್ಲಿ ಕೋರಿದರು. **(ಅರಣ್ಯ ಇಲಾಖೆ (ದಕ್ಷಿಣ) ಬಿ.ಬಿ.ಎಂ.ಪಿ ಜಯನಗರ)**

7. ಈತ್ತಿಚೀನ ದಿನಗಳಲ್ಲಿ ನಡೆಯುತ್ತಿರುವ ಸೈಬರ್ ಕ್ರೈಮ್ ಪ್ರಕರಣಗಳ ಹೆಚ್ಚಾಗುತ್ತಿದ್ದು. ಇದರ ಬಗ್ಗೆ ಜನ ಜಾಗೃತಿ ಮುಡಿಸಲು ವಾರ್ಡ ಮಟ್ಟದಲ್ಲಿ ಸಭೆಯನ್ನು ಆಯೋಜಿಸಲು ಪೋಲಿಸ್ ಇಲಾಖೆಗೆ ಕೋರಿದರು. **(ಕ್ರಮ: ಜಯನಗರ ಮತ್ತು ತಿಲಕ್‌ನಗರ ಪೋಲಿಸ್ ಠಾಣೆ)**

8. 

9. LIC ಕಾಲೋನಿನಲ್ಲಿರುವ 1ನೇ ಅಡ್ಡರಸ್ತೆ, 3ನೇ ಮುಖ್ಯರಸ್ತೆಯಲ್ಲಿನ ಮ್ಯಾನ್‌ಹೋಲ್ ತುಂಬಿಕೊಂಡಿರುತ್ತದೆ. ಕೊಡಲೇ ಮ್ಯಾನ್‌ಹೋಲ್‌ನಿಂದ ಹೂಳು ತೆಗೆಯಲು ಸಭೆಯಲ್ಲಿ ಕೋರಿದರು. **(ಕ್ರಮ: ಸ.ಕಾ.ನಿ.ಅ, BWSSB ಜಯನಗರ)**

10. ಜಯನಗರ 4ನೇ 'ಟಿ' ಬ್ಲಾಕ್‌ನಲ್ಲಿರುವ ವಿಷ್ಣುವರ್ಧನ್ ಪಾರ್ಕನಲ್ಲಿ ಹೊಸದಾಗಿ ಮಳೆ ನೀರಿನ ಇಂಗು ಗುಂಡಿ (Rain water Harvesting pits) ಅನ್ನು ನಿರ್ಮಿಸಲು ಸಭೆಯಲ್ಲಿ ಕೋರಿದರು. **(ತೋಟಗಾರಿಕೆ ಇಲಾಖೆ (ದಕ್ಷಿಣ) ಮತ್ತು ಯೋಜನೆ(ದಕ್ಷಿಣ) ಬಿ.ಬಿ.ಎಂ.ಪಿ ಜಯನಗರ)**

11. ಜಯನಗರ 4ನೇ 'ಟಿ' ಬ್ಲಾಕ್‌ನಲ್ಲಿರುವ ವಿಷ್ಣುವರ್ಧನ್ ಪಾರ್ಕನಲ್ಲಿ ದೂಡ್ಡದಾದ ಮರ ಇದ್ದು, ಈ ಮರವು ಒಣಗಿದ ಕೊಂಬೆಗಳು ಮತ್ತು ಮರವು ಬೀಳುವ ಸ್ಥಿತಿಯಲ್ಲಿದ್ದು. ಇದ್ದರಿಂದ ಪಾರ್ಕಗೆ ಬರುವ ಸಾರ್ವಜನಿಕರಿಗೆ ತುಂಬಾ ಭಯದ ವಾತವರಣದಲ್ಲಿ ಪಾರ್ಕನಲ್ಲಿ ಓಡಡುತ್ತಿದ್ದರೆ. ಕೊಡಲೇ ಮರವನ್ನು ಕತ್ತರಿಸಿ ತೆಗೆಯುವಂತೆ ಸಭೆಯಲ್ಲಿ ಕೋರಿದರು. **(ಅರಣ್ಯ ಇಲಾಖೆ (ದಕ್ಷಿಣ) ಬಿ.ಬಿ.ಎಂ.ಪಿ ಜಯನಗರ)**

12. LIC ಕಾಲೋನಿನಲ್ಲಿರುವ 5ನೇ ಅಡ್ಡರಸ್ತೆ, 5ನೇ ಮುಖ್ಯರಸ್ತೆಯಲ್ಲಿ (ಗಣೇಶ ದೇವಸ್ಥಾನ ಹಿಂಭಾಗ) ಕಸದ ಪ್ರಮಾಣ ಹೆಚ್ಚಾಗುತ್ತಿದ್ದು. ಇದರ ಬಗ್ಗೆ ಕ್ರಮ ವಹಿಸುವಂತೆ ಸಭೆಯಲ್ಲಿ ಕೋರಿದರು. **(ಕ್ರಮ: ಸ.ಕಾ.ನಿ.ಅ, SWM ಜಯನಗರ, ಬಿ.ಬಿ.ಎಂ.ಪಿ)**

13. ಜಯನಗರ 4ನೇ 'ಟಿ' ಬ್ಲಾಕ್‌ನಲ್ಲಿರುವ ವಿಷ್ಣುವರ್ಧನ್ ಪಾರ್ಕನಲ್ಲಿ ಸುತ್ತಲು ಇರುವ ರಸ್ತೆ ಚರಂಡಿಗಳಿಂದ ಹೂಳು ತೆಗೆಯಲು ಸಭೆಯಲ್ಲಿ ಕೋರಿದರು. **(ಕ್ರಮ: ಸ.ಕಾ.ನಿ.ಅ, ಜಯನಗರ ಉಪ-ವಿಭಾಗ, ಬಿ.ಬಿ.ಎಂ.ಪಿ)**

14. ಜಯನಗರ 4ನೇ 'ಟಿ' ಬ್ಲಾಕ್‌ನಲ್ಲಿರುವ ವಿಷ್ಣುವರ್ಧನ್ ಪಾರ್ಕನಲ್ಲಿರುವ ಬೀದಿ ದೀಪಗಳನ್ನು ಹಾಳಾಗಿದ್ದು. ಇದರಿಂದ ಸಂಜೆ ಮತ್ತು ಮುಂಜಾನೆ ಸಮಯದಲ್ಲಿ ಸಾರ್ವಜನಿಕರಿಗೆ ಓಡಡಲು ತೊಂದರೆಯಾಗುತ್ತಿದ್ದು ಮತ್ತು ಹಳೆಯ ವಾರ್ಡ 169ರ ನಕ್ಕಲುಬಂಡೆಯಲ್ಲಿನ ಅನೇಕ ಪ್ರದೇಶದಲ್ಲಿ ಬೀದಿ ದೀಪಗಳನ್ನು ಹಾಳಾಗಿದ್ದು. ಕೂಡಲೇ ಬೀದಿ ದೀಪಗಳನ್ನು ಅಳವಡಿಸುವಂತೆ ಸಭೆಯಲ್ಲಿ ಕೋರಿದರು. **(ಕ್ರಮ: ಸ.ಕಾ.ನಿ.ಅ, ವಿದ್ಯುತ್ (ದಕ್ಷಿಣ) ಇಲಾಖೆ, ಜಯನಗರ, ಬಿ.ಬಿ.ಎಂ.ಪಿ)**

15. ಜಯನಗರ 4ನೇ 'ಟಿ' ಬ್ಲಾಕ್‌ನಲ್ಲಿರುವ ಸಾರ್ವಜನಿಕರು ಕುಳಿತುಕೊಳ್ಳುವ Shelter ಗಳ ಛಾವಣಿವು ಹಾಳಾಗಿದ್ದು ಮಳೆಯ ನೀರಿನಿಂದ ಸೂರುತ್ತಿದ್ದು. ಸದರಿ Shelter ಗಳನ್ನು ದುರಸ್ತಿ ಪಡೆಸುವಂತೆ ಅಂತಹ ಸಭೆಯಲ್ಲಿ ಕೋರಿದರು. **(ಕ್ರಮ: ಸ.ಕಾ.ನಿ.ಅ, ಯೋಜನೆ (ದಕ್ಷಿಣ), ಜಯನಗರ, ಬಿ.ಬಿ.ಎಂ.ಪಿ)**

16. ಹಳೆಯ ವಾರ್ಡ 169ರ ನಕ್ಕಲುಬಂಡೆಯಲ್ಲಿನ ಅನೇಕ ಪ್ರದೇಶದಲ್ಲಿ ಮ್ಯಾನ್‌ಹೋಲ್ ತುಂಬಿಕೊಂಡಿರುತ್ತದೆ. ಕೂಡಲೇ ಮ್ಯಾನ್‌ಹೋಲ್‌ನಿಂದ ಹೂಳು ತೆಗೆಯಲು ಸಭೆಯಲ್ಲಿ ಕೋರಿದರು. **(ಕ್ರಮ: ಸ.ಕಾ.ನಿ.ಅ, BWSSB ಜಯನಗರ)**

**ನಿರ್ಣಯ:** ಕೊನೆಯದಾಗಿ ಸದಸ್ಯ ಕಾರ್ಯದರ್ಶಿಗಳು ಸಭೆಗೆ ಹಾಜರಾದ ಎಲ್ಲಾ ಸದಸ್ಯರು ಮತ್ತು ಅಧಿಕಾರಿಗಳಿಗೆ ವಂದನೆಯನ್ನು ತಿಳಿಸುತ್ತಾ, ಇಂದಿನ ಸಭೆಯಲ್ಲಿ ಚರ್ಚಿಸಿದ ವಿಷಯಗಳ ಬಗ್ಗೆ ಕೈಗೊಂಡಿರುವ ಕ್ರಮಗಳನ್ನು ಮುಂದಿನ ಸಭೆಯಲ್ಲಿ ವರದಿ ಮಾಹಿತಿಯನ್ನು ಒದಗಿಸಬೇಕೆಂದು ಕಾರ್ಯದರ್ಶಿ ಮತ್ತು ಇಲಾಖಾ ಅಧಿಕಾರಿಗಳಿಗೆ ತಿಳಿಸಿ, ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ಶ್ರೀ ಚಂದ್ರಶೇಖರ್.ವಿ)
ಕಾರ್ಯದರ್ಶಿ ಮತ್ತು ಸಂಚಾಲಕರು ವಾರ್ಡ್ ಸಮಿತಿ ಸಭೆ
ಹೊಸ ವಾರ್ಡ-196 ಬೈರಸಂದ್ರ (ಹಳೆಯ ವಾರ್ಡ 168&169)

(ಶ್ರೀ ವಾಲು ರಾಥೋಡ್)
ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳು
ವಾರ್ಡ್ ಸಮಿತಿ ಸಭೆ
ಹೊಸ ವಾರ್ಡ-196 ಬೈರಸಂದ್ರ (ಹಳೆಯ ವಾರ್ಡ 168&169)

1. ಮಾನ್ಯ ಮುಖ್ಯ ಆಯುಕ್ತರು, ಬಿ.ಬಿ.ಎಂ.ಪಿ ರವರ ಅವಗಾಹನೆಗೆ ತರಲು ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸಿದೆ.
2. ಮಾನ್ಯ ವಲಯ ಆಯುಕ್ತರು (ದಕ್ಷಿಣ), ಬಿ.ಬಿ.ಎಂ.ಪಿ ರವರ ಅವಗಾಹನೆಗೆ ಸಲ್ಲಿಸಿದೆ.
3. ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
4. ಕಛೇರಿ ಕಡತಕ್ಕೆ.